ಜಾಣರ ಪೆಟ್ಟಿಗೆ



## ಸಾರ್ಥಕ ಭಾವದ 'ಸ್ವರ ಸಂಕ್ರಾಂತಿ'

ಝೀ ಕನ್ನಡ ವಾಹಿನಿಯಲ್ಲಿ 'ಸರಿಗಮಪ' ಕಾರ್ಯಕ್ರಮದಲ್ಲಿ ಸಂಕ್ರಾಂತಿ ಹಬ್ಬದ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದ್ದು ಸಕಾಲಿಕವಾಗಿತ್ತು. ಗಾಯಕರು ವಿಶೇಷ ವಸ್ತ್ರವಿನ್ಯಾಸದಿಂದ ಅಲಂಕೃತಗೊಂಡು ಜನಪದ ಹಾಗೂ ರಂಗಗೀತೆಗಳನ್ನು ಸುಂದರವಾಗಿ ಪ್ರಸ್ತುತಪಡಿಸಿದರು. ಗಾಯನಕ್ಕೆ ಪೂರಕವಾಗಿ ವಾದ್ಯ ವೃಂದ ಅಷ್ಟೇ ಸೊಗಸಾಗಿತ್ತು. ಸಂಕ್ರಾಂತಿಯ ಪ್ರಯುಕ್ತ ಅಯ್ಯಪ್ಪ ಸ್ವಾಮಿಯ ಭಕ್ತಿಗೀತೆ ಹಾಡಿದ್ದು ಸ್ವಾಮಿಯ ದರ್ಶನ ಮಾಡಿದಷ್ಟೇ ಧನ್ಯಭಾವ ಮೂಡಿಸಿತು.

—ಭಾರತೀ ಗಂಗಾಧರ್, ಬೆಂಗಳೂರು

ಝೀ ಕನ್ನಡದ ಸ್ವರ ಸಂಕ್ರಾಂತಿ 'ಸರಿಗಮಪ' ಸಂಚಿಕೆ ಅದ್ಭುತವಾಗಿ ಮೂಡಿಬಂದಿತು. ಸಂಕ್ರಾಂತಿ ಹಬ್ಬಕ್ಕೆ ಭಕ್ತಿಗೀತೆಗಳು, ತತ್ವಪದ, ಜನಪದ ಗೀತೆಗಳ ಭೂರಿ ಭೋಜನವನ್ನು ಉಣಬಡಿಸಿದರು. ಕಾರ್ಯಕ್ರಮದಲ್ಲಿ ಸ್ಪರ್ಧಿಗಳು, ತೀರ್ಪುಗಾರರು, ಮಾರ್ಗದರ್ಶಿಗಳು, ವಾದ್ಯವೃಂದದವರು ಸಾಂಪ್ರದಾಯಿಕ ಉಡುಗೆ ತೊಡುಗೆಗಳ ಮೂಲಕ ಮತ್ತಷ್ಟು ಶ್ರೀಮಂತಗೊಳಿಸಿದರು.

—ಓಂಕಾರ್ ಗುರುಸಿದ್ದಪ್ಪ ಕೊಟ್ರೆ, ಬೆಂಗಳೂರು

ವಾರದ ಪತ್ರ

## ಕನ್ನಡದ ಬಾಲು!

ಖಾಸಗಿ ವಾಹಿನಿಗಳ ಧಾರಾವಾಹಿಗಳಲ್ಲಿ ಇಂಗ್ಲಿಷ್ ಬಳಕೆಗೆ ಬರವಿಲ್ಲ. ಒಂದೊಂದು ಕನ್ನಡ ಪದವನ್ನು ಕೊಲೆ ಮಾಡಲಾಗುತ್ತಿದೆ. ಅಪರೂಪ ಎಂಬಂತೆ 'ಕಲರ್ಸ್ ಕನ್ನಡ'ದಲ್ಲಿ ಪ್ರಸಾರವಾಗುತ್ತಿರುವ 'ನಿನಗಾಗಿ' ಧಾರಾವಾಹಿಯಲ್ಲಿ ನಾಯಕ ನಟ ಜೀವ ಅವರ ಬಾವಮೈದುನ (ಮೃತ ಹೆಂಡತಿಯ ಸೋದರ) ಬಾಲು ಪಾತ್ರಧಾರಿ ಯಾವಾಗಲೂ ಟೀಶರ್ಟ್ ಧರಿಸುತ್ತಾರೆ. ಬಾಲು ತೊಡುವ ಟೀಶರ್ಟ್ ಮೇಲೆ ಯಾವುದಾದರೂ ಮುದ್ರಿತ 'ಕನ್ನಡ ಸೂಕ್ತಿ' ಇದ್ದೇ ಇರುತ್ತದೆ. ಉದಾಹರಣೆಗೆ 'ಕಣ ಕಣದಲ್ಲೂ ಕನ್ನಡ', 'ಬದುಕು ಜಟಕಾ ಬಂಡಿ', 'ನೀ ಹೀಂಗ ನೋಡ ಬ್ಯಾಡ ನನ್ನ', 'ನೋಡಿ ಸ್ವಾಮಿ ನಾವಿರೋದೆ...' ಮುಂತಾದ ಕನ್ನಡದ ವಾಕ್ಯಗಳಿರುತ್ತವೆ.

ಈ ಮೂಲಕ ಕನ್ನಡ ಕವಿವಾಣಿಯನ್ನು ಪ್ರಚುರಪಡಿಸಿದಂತೆ ಆಗುತ್ತದೆ. ಈ ಕಾರಣಕ್ಕೆ ಬಾಲು ಪಾತ್ರದಾರಿಯನ್ನು ಮೆಚ್ಚುತ್ತೇನೆ. ಬಹುತೇಕ ಕನ್ನಡಿಗರು ಇಂಗ್ಲಿಷ್ ಪದವುಳ್ಳ ಟೀಶರ್ಟ್ ಧರಿಸುವುದೇ ಪ್ರತಿಷ್ಠೆಯನ್ನಾಗಿ ಮಾಡಿಕೊಂಡಿದ್ದರೆ, 'ನಿನಗಾಗಿ' ಧಾರಾವಾಹಿಯ ಬಾಲು ಕನ್ನಡ ನುಡಿ ಮುತ್ತಿನ ಟೀಶರ್ಟ್ ಧರಿಸುವ ಮೂಲಕ ತನ್ನ ಕನ್ನಡ ಪ್ರೇಮವನ್ನು ತನಗರಿವಿಲ್ಲದೆ ವ್ಯಕ್ತಪಡಿಸುತ್ತಿದ್ದಾರೆ. ಅವರನ್ನು 'ಕನ್ನಡದ ಬಾಲು' ಎಂದು ಕರೆಯಬಹುದು.

—ಸಿ. ಸಿದ್ದರಾಜು ಆಲಕೆರೆ, ಮಂಡ್ಯ

ಝೀ ಕನ್ನಡ ವಾಹಿನಿಯ 'ಸರಿಗಮಪ' ಮಹಾಸಂಚಿಕೆ ಭಿನ್ನವಾಗಿತ್ತು. ನಟ ಸುದೀಪ್ ಅತಿಥಿಯಾಗಿದ್ದರು. ಅವರ ಪತ್ನಿ, ಮಗಳೂ ಆಗಮಿಸಿದ್ದರು. ಸಾನ್ವಿ ಹಾಡು ಚೆನ್ನಾಗಿತ್ತು. ಹೊಸಪೇಟೆಯ ಭೂಮಿಕಾ 'ಮೈ ಆಟೋಗ್ರಾಫ್' ಸಿನಿಮಾದ ಹಾಡನ್ನು ಹಾಡಿದ್ದು ಮನೋಜ್ಞವಾಗಿತ್ತು.

ಸರಿಗಮಪ ಕಾರ್ಯಕ್ರಮದ ಮೂಲಕ ಎಲೆಮರೆಯ ಕಾಯಿಯಂತಿದ್ದ ಪ್ರತಿಭೆಗಳನ್ನು ಪರಿಚಯಿಸುತ್ತಿರುವ ಝೀ ಕನ್ನಡ ವಾಹಿನಿಗೆ ಅನಂತ ಧನ್ಯವಾದಗಳು.

—ಎಸ್.ವಿ. ಗೋಪಾಲ್ ರಾವ್

## ಕುತೂಹಲ ಹುಟ್ಟಿಸಿರುವ 'ವಧು' ಕಥೆ

ಟಿ.ಎನ್. ಸೀತಾರಾಂ ಅವರು ಲಾಯರ್ ಕೋಟು ತೊಟ್ಟು ಮತ್ತೆ ಟೀವಿಯಲ್ಲಿ ಕಾಣಿಸಿಕೊಳ್ಳುತ್ತಿರುವುದು ಖಚಿತವಾಗಿದೆ. 'ಮಿಂಚು', 'ಮುಕ್ತ', 'ಮುಕ್ತ ಮುಕ್ತ', 'ಮಾಯಾಮೃಗ', 'ಮಹಾಪರ್ವ', 'ಮಗಳು ಜಾನಕಿ', 'ಮತ್ತೆ ಮಾಯಾಮೃಗ' ಧಾರಾವಾಹಿಗಳನ್ನು ನೀಡಿದ ಟಿ.ಎನ್. ಸೀತಾರಾಂ ಅವರು 'ವಧು' ಧಾರಾವಾಹಿಯಲ್ಲಿ, ಬೇರೊಬ್ಬರ ನಿರ್ದೇಶನದಲ್ಲಿ ಕರಿಕೋಟು ತೊಟ್ಟಿರುವುದು ಕುತೂಹಲ ಹುಟ್ಟಿಸಿದೆ. ಕಲರ್ಸ್ ಕನ್ನಡದ ಡಿವೋರ್ಸ್ ಲಾಯರ್ ಮದುವೆ ಕತೆ ನೋಡುವ ಕುತೂಹಲ ಹುಟ್ಟಿದೆ.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ದಿಕ್ಕೆಟ್ಟು ಬಸವಳಿದ ರಾಮಾಚಾರಿ

ಕಲರ್ಸ್ ಕನ್ನಡ ವಾಹಿನಿಯ 'ರಾಮಾಚಾರಿ' ದಿಕ್ಕೆಟ್ಟ ಹಾಗೆ ಸಾಗುತ್ತಲೇ ಇದೆ. ದಿನಕ್ಕೊಂದು ಹೊಸ ತಿರುವು ಪಡೆಯುತ್ತಿದೆ. ಅದರಲ್ಲೂ ಅಲ್ಲೆಲ್ಲೋ ಜೈಲಿನಲ್ಲಿ ಇದ್ದ ವೈಶಾಖಾ ಗಂಡನ ಮನೆಗೆ ಬರುವುದು. ರುಕ್ಮಿಣಿ ಪಾತ್ರ ಪೇಲವವಾಗಿದೆ. ಕಾದ ಎಣ್ಣೆ ಸುರಿಯುವ, ದೊಣ್ಣೆಯಿಂದ ಹೊಡೆಯುವ ದೌರ್ಜನ್ಯವನ್ನು ಬೇರೆಲ್ಲೂ ಕಾಣಲು ಸಾಧ್ಯವಿಲ್ಲ. ಸ್ತ್ರೀ ಕುಲಕ್ಕೆ ಈ ರೀತಿ ಅವಮಾನ ಮಾಡಿದ ನಡೆ ಅತ್ಯಂತ ಘೋರ ಮತ್ತು ಅನಾಗರಿಕ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಅನಗತ್ಯ ಪಾತ್ರ ಪೋಷಣೆ

ಝೀ ಕನ್ನಡದ 'ಶ್ರಾವಣಿ ಸುಬ್ರಹ್ಮಣ್ಯ'ದ ಕಾಂತಮ್ಮತ್ತೆಯ ಅತಿರೇಕದ ಅಭಿನಯ ಕಿರಿ ಕಿರಿ ಅನ್ನಿಸುತ್ತಿದೆ. ಕಥೆಗೆ ಈ ಅಮ್ಮ ಮಗನ ಅಗತ್ಯ ಇದೆಯೇ? ಅನಗತ್ಯ ಪಾತ್ರಗಳನ್ನು ಏಕೆ ಪೋಷಿಸಬೇಕು? ದಯಮಾಡಿ ಈ ಕಿರಿ ಕಿರಿ ತಪ್ಪಿಸಿ.

—ಕಮಲಾ ರಾವ್, ಬೆಂಗಳೂರು

## ಮೂರ್ಖರ ಸಂತೆಯಾದರೆ ಹೇಗೆ?

ಕಲರ್ಸ್ ಕನ್ನಡದ 'ಬಿಗ್ ಬಾಸ್' ಹತ್ತು ಸೀಸನ್‌ಗಳನ್ನು ನೋಡಿದ ನಮಗೆ 11ನೇ ಸೀಸನ್ ಅತ್ಯಂತ ಕಳಪೆ ಅನ್ನಿಸುತ್ತಿದೆ. ಸ್ಪರ್ಧಿಗಳ ದ್ವಿಮುಖಗಳನ್ನು ನೋಡಿ ನೋಡಿ ಸಾಕಾಗಿದೆ. ತನ್ನ ಮಾತುಗಳನ್ನೇ ಅಸ್ತ್ರ ಮಾಡಿಕೊಂಡಿದ್ದ ಚೈತ್ರ ನಿರ್ಗಮಿಸಿದ್ದಾರೆ. ಅವರನ್ನು ಏಕೆ ಕರೆಸಿದ್ದಾರೋ ಎಂದೆನಿಸುವಷ್ಟು ಅವರ ಮಾತು ಚಿಟ್ಟು ಹಿಡಿಸಿತ್ತು. ಜಗಳವನ್ನೇ ಬಂಡವಾಳವನ್ನಾಗಿ ಮಾಡಿಕೊಂಡಿರುವ ರಜತ್ ಅವರ ವಾದ ಅಸಹಜವಾಗಿದೆ.

—ಪುಷ್ಪಾ ಎನ್.ಕೆ. ರಾವ್

## ಅರ್ಥಪೂರ್ಣ ಹರಟೆ

ಚಂದನ ವಾಹಿನಿಯ 'ಹರಟೆ' ಕಾರ್ಯಕ್ರಮದ ಇತ್ತೀಚಿನ ಕಂತಿನಲ್ಲಿನ ಒಂಟಿಯೋ ಜಂಟಿಯೋ ಎಂಬ ಚರ್ಚೆ ಹಿರೇಮಗಳೂರು ಕಣ್ಣನ್ ಅವರ ನೇತೃತ್ವದಲ್ಲಿ ಸೊಗಸಾಗಿ ಮೂಡಿಬಂತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಾತಿನ ಮಲ್ಲರ ವಿಚಾರ ವಿನಿಮಯ ಅರ್ಥಪೂರ್ಣವಾಗಿತ್ತು. ಒಂಟಿ ಬದುಕು ಜಂಟಿಯಾಗಿ ಮದುವೆ ಆದಾಗಲೇ ಸಾರ್ಥಕ ಎಂಬ ಮಾನವೀಯ ಅಂಶವನ್ನು ತರ್ಕಬದ್ಧವಾಗಿ ನಿರೂಪಿಸಿದ ವಿಚಾರ ಚಿಂತಕರಿಗೆ ಧನ್ಯವಾದಗಳು.

—ಕುಬೇರಪ್ಪ ಎಂ. ವಿಭೂತಿ